# ಬೆಟ್ಟದಾ ಮೇಲೊಂದು ಸೊನೆಯ ತಾಣ!

**ಮಂಡ್ಯ ಜಿಲ್ಲೆ ಹಲಗೂರು ಸಮೀಪದ ಬಸವನಬೆಟ್ಟ ಚಾರಣಿಗರಿಗೆ ಬಲು ಪರಿಚಿತ. ಹಾಗೆಯೇ ಇಲ್ಲಿನ 'ಸೊನೆ ಅವರೆ' ತನ್ನ ಪರಿಮಳದಿಂದ ಮಾರುಕಟ್ಟೆಯಲ್ಲಿ ಪ್ರಸಿದ್ಧ. ಈ 'ಹೆಬ್ಬೆಟ್ಟ'ದ ಅಂಚಿಗೆ ನಿಂತಾಗ ಕಾಣುವ ಪ್ರಕೃತಿಯ ರಮಣೀಯ ನೋಟ ಎಂಥವರನ್ನೂ ಮುದಗೊಳಿಸುತ್ತದೆ.**



ಅವರೆ ಕೊಯ್ಲಿನ ಖುಷಿ

**■ ಆನಂದತೀರ್ಥ ಪ್ಯಾಟಿ**

ಬೆಳ್ಳಂಬೆಳಿಗ್ಗೆ ಬೆಂಗಳೂರಿನಿಂದ ಕನಕಪುರ ರಸ್ತೆಯಲ್ಲಿ ಸಾಗುತ್ತಿರುವಾಗ, ನಮ್ಮ ಜತೆಗೇ ಹತ್ತಾರು ಸೂಪರ್ ಬೈಕು, ಕಾರು, ಟೆಂಪೋಗಳು ರಭಸದಿಂದ ಓವರ್ ಟೇಕ್ ಮಾಡಿ ಮುಂದೆ ಓಡುತ್ತಿದ್ದವು. ಅಷ್ಟೊಂದು ಅವಸರ ಏನಿದೆಯೋ ಅಂತ ನಮ್ಮಷ್ಟಕ್ಕೆ ನಾವೇ ಕೇಳಿಕೊಂಡೆವು. ಕೆಲವು ಕ್ಷಣಗಳಲ್ಲೇ ಗೊತ್ತಾಯಿತು ಅವತ್ತು ಶನಿವಾರ! ಮೈಸೂರಿಗೆ ಹೋಗಲು ಎಕ್ಸ್‌ಪ್ರೆಸ್ ಹೈವೇ ಹೊರತುಪಡಿಸಿದರೆ ಇದೇ ಪರ್ಯಾಯ ದಾರಿ! ಬೆಂಗಳೂರಿಗರಿಗೆ ಒಂದೆರಡು ದಿನಗಳ ಪ್ರವಾಸಕ್ಕೆ ಪಕ್ಕದ ಮೈಸೂರಿಗಿಂತ ಸೊಬಗಿನ ಪ್ರವಾಸ ಮತ್ತಾವುದು ಇದ್ದೀತು?

ಕನಕಪುರದಿಂದ ಅನತಿ ದೂರದಲ್ಲಿ 'ಬಸವಾಪುರ' ಎಂಬ ಫಲಕದ ಬಳಿ ಎಡಕ್ಕೆ ಹೊರಳಿ ಹೊರಟಾಗ, ಹಿಂದೆ ಮುಂದೆ ಒಂದೇ ಒಂದು ವಾಹನವೂ ಇರಲಿಲ್ಲ! ನಿರಾಳವಾಗಿ ಐದಾರು ಕಿಲೋಮೀಟರ್ ಕ್ರಮಿಸಿದರೆ ಬಸವಾಪುರ ಸಿಕ್ಕಿತು. 'ಈಗ ಇಲ್ಲಿಂದ ಗಮನಿಸಿ, ಇಡೀ ಪರಿಸರವೇ ಬದಲಾಗಿ ಬಿಡುತ್ತದೆ' ಎಂದರು, ಮಿತ್ರ ಸೋಮೇಶ್. ವಾಸ್ತವವಾಗಿ, ಅವರ ಊರು ಪಕ್ಕದ ಗ್ರಾಮದೇವತೆಪುರ. ಬಸವನಬೆಟ್ಟಕ್ಕೆ ವಿಹಾರದ ಸಲಹೆ ಹಾಗೂ ಮಾರ್ಗದರ್ಶನ ಅವರದೇ ಆಗಿತ್ತು. ಬಸವಾಪುರದಿಂದ ದಿಢೀರನೇ ಭೂದೃಶ ಬದಲಾಯಿತು.

ಅಂಕುಡೊಂಕಾದ ಟಾರ್ ರೋಡು. ಘಟ್ಟವನ್ನು ನೆನಪಿಸುವ ಕಡಿದಾದ ಕಿರು ರಸ್ತೆ. ಮೇಲೇರುತ್ತ ಹೋದಂತೆ ಮೈನಡುಗಿಸುವಷ್ಟು ಚಳಿ. ಅಕ್ಕಪಕ್ಕದಲ್ಲೆಲ್ಲ ವ್ಯಾಪಿಸಿದ ತರಹೇವಾರಿ ಗಿಡಮರ, ಪೊದೆ ಬಳ್ಳಿಗಳು. ಸೂರ್ಯೋದಯದ ಸಮಯದಲ್ಲಿ ನಾವು ಅಲ್ಲಿದ್ದರಿಂದ, ಆಸುಪಾಸು ಮೋಡಗಳ ಹಿನ್ನೆಲೆಯಲ್ಲಿ ದೂರದ ಬೆಟ್ಟಗಳು ಕಣ್ಣಾಮುಚ್ಚಾಲೆ ಆಡುತ್ತಿದ್ದವು. ಬೆಟ್ಟದ ಮೇಲಿನ ವಿಶಾಲ ಪ್ರದೇಶ ತಲುಪುತ್ತಿದ್ದಂತೆ ನವಿಲುಗಳ ಹಿಂಡು ಕಾಣಿಸಿತು. ಜನಸಾಗರದ ಬೆಂಗಳೂರಿನಿಂದ ಬರೀ ಒಂದೂವರೆ ತಾಸಿನಲ್ಲೇ ನಿಸರ್ಗದ ಮಡಿಲಲ್ಲಿರುವ ತಾಣದಲ್ಲಿ ಬಂದು ಸೇರಿದ್ದೆವು.

ಹೆಬ್ಬೆಟ್ಟಕ್ಕೆ ಚಾರಣಿಗರು, ವಿಹಾರಕ್ಕಾಗಿ ತೆರಳುವವರೇ ಹೆಚ್ಚು. ಸುತ್ತಮುತ್ತಲೂ ಮೋಡಗಳ ಚೆಲ್ಲಾಟ. ಕಣ್ಣಿಗೆ ಮುದ ನೀಡುವ ನೋಟ. ಆದರೆ ನಮ್ಮದು ಆ ಬೆಟ್ಟದಲ್ಲಿ ಬೆಳೆಯುವ ಅವರೆ ಘಮಲು ಆಘ್ರಾಣಿಸುವ ಉದ್ದೇಶ! ಬೇಸಿಗೆಗೂ ಮೊದಲು ಈ ಭಾಗದಲ್ಲಿ ಬೆಳೆದು, ಮಾರುಕಟ್ಟೆಯಲ್ಲಿ ಒಳ್ಳೆಯ ದರ ಗಿಟ್ಟಿಸುವ ಅವರೆ ಬೇಸಾಯದ ಬಗ್ಗೆ ತಿಳಿಯಲು ಬರುವವರು ಬೆರಳೆಣಿಕೆಯಷ್ಟು ಜನ ಮಾತ್ರ.

## ಹಿಂಗಾರಿಗೆ ರಾಗಿ ಅವರೆ

ದಕ್ಷಿಣ ಕನ್ನಾಡಿನ ಪ್ರಮುಖ ಬೆಳೆ ರಾಗಿ. ಹಿಂಗಾರು ಹಂಗಾಮಿನಲ್ಲಿ ರಾಗಿ ಜತೆಗೆ ಅವರೆಯನ್ನು ಮಿಶ್ರ ಬೆಳೆಯಾಗಿ ಬೆಳೆಯಲಾಗುತ್ತದೆ. ಹಸ್ತಾ ಮಳೆ ಬಿತ್ತನೆಗೆ ಸೂಕ್ತ ಎಂಬುದು ರೈತರ ಅನುಭವ. ರಾಗಿಯನ್ನು ಕೂರಿಗೆ ವಿಧಾನದಲ್ಲಿ ಬಿತ್ತುವಾಗ ಜತೆಜತೆಗೇ ಅವರೆಯನ್ನು ಅಂದಾಜು ಅಂತರದಲ್ಲಿ ಬಿತ್ತುತ್ತಾರೆ. ಸೆಪ್ಟೆಂಬರ್ ಆಸುಪಾಸು ಬಿತ್ತನೆಯಾದರೆ, ಜನವರಿಯಲ್ಲಿ ರಾಗಿ ಕೊಯ್ಲು.



ಪ್ರಾಕೃತಿಕ ರಮ್ಯ ತಾಣ ಬಸವನಬೆಟ್ಟ